ಸ್ಯ 1910ನೆ ಇಸವಿ ಫೆಬ್ರವರಿ ಮಾಹೆ 26ನೆ ತಾರೀಖಿನಲ್ಲಿ ಪ್ರಾರಂಭವಾಗಿ ಹತ್ತು ದಿನಗಳವರಿಗೂ ಹೊನ್ನಾಳಿ ತಾಲ್ಲೂಕು ರಾಮಪುರದಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ಗೌರ್ನಮೆಂಟಿನಿಂದ ತಲ್ಪಿರುವ 22—12—00ನೆ ಮುಕ್ಕಂ 5540-1—ಲೋ. ಫಂ. 495-05-4ನೆ ನಂಬರು ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ಜಾತ್ರೆ ನಡೆಯುವ ರಾಮಪುರ ಗ್ರಾಮದ ಸಮೀಪದಲ್ಲಿ ಸೂಸವೆಹಳ್ಳಿಗೆ ಹೋಗುವ ಕಾಲುದಾರಿ ಪಕ್ಕದ ವೈಡಾನದಲ್ಲಿ ಪ್ರದರ್ಶನವು ನಡೆಯಲು ಏರ್ಪಡಿಸಿರುತ್ತದೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, 2ನೆ ಬಹುಮಾನ 10 ರೂಪಾಯಿ, ಅತ್ಯುತ್ತಮವಾದ ಬೀಜದ ಹೋರಿ ಬಂದಕ್ಕೆ ಬಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಹಸು 1ಕ್ಕೆ ಬಂದನೆ ಬಹುಮಾನ 15 ರೂಪಾಯಿ ಅತ್ಯುತ್ತಮವಾದ ಎಮ್ಮೆ 1ಕ್ಕೆ ಬಂದನೆ ಬಹುಮಾನ 10 ರೂಪಾಯಿ ಈರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳು ಕೊಡಲು ಉತ್ತಮ ಜಾನುವಾರುಗಳನ್ನು ಆಯ್ಕೆಮಾಡಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನವು ಮುಗಿದಕೂಡ್ಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate) ದೊರಿಯುತ್ತದೆ.

6. ಇನಾಂ ಪಡಿಯಲು ಲಾಯಕ್ಕಾದ ಜಾನುವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಸದರಿ ಇನಾಂ ಅನಾಮತ್ತಿನಲ್ಲಿಡುವದಕ್ಕಾಗಲೀ ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲೀ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು ಹೊನ್ನಾಳಿ ತಾಲ್ಲೂಕು ಅಮಲ್ದಾರರವರಿಗೆ ಆಗಲೀ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೇ ಆಗಲೀ ಪ್ರದರ್ಶನ ಶುರುವಾಗುವದಕ್ಕೆ ಮುಂಚಿತವಾಗಿ ಬಂದು ದಿವಸಕ್ಕೆ ಕವ್ವಿ ಇಲ್ಲದೆ ಅವಕಾಶವಿರುವಂತೆ ಬರೆದು ತಮ್ಮ ಹೆಸರು ಜಾನುವಾರು ತಪಶೀಲು ದಾಖಲ್ಮಾಡಿಸಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲೀ ಅಥವಾ ಅವುಗಳಿಂದ ಜನಗಳಿಗೇ ಆಗಲೀ ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಬಹುದಾದ ರಾತೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನುವಾರುಗಳಿಗೆ ರಾತೀಬಿನ ಏರ್ಪಾಡು ಅವುಗಳ ಮಾಲೀಕರೇ ನೋಡಿಕೊಳ್ಳುವದು ಒಳ್ಳೆಯದು.

10. ಈ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರುಗಳು ಸೇರುವದರಿಂದ ವ್ಯಾಪಾರದ ಬಹಳ ಚೆನ್ನಾಗಿ ನಡಿಯುತ್ತದೆ.

11. 1909ನೆ ಮಾರ್ಚಿ ತಿಂಗಳಲ್ಲಿ ಕೂಡ್ಲೆ ಜಾತ್ರೆ ಕಾಲದಲ್ಲಿ ನಡೆದ ಪ್ರದರ್ಶನ ಕಾಲದಲ್ಲಿ ಬಹುಮಾನ ಕೊಡಲ್ಪಟ್ಟಿದ್ದರ ತಪಸೀಲ್ ಈ ಕೆಳಗೆ ಸನ್ನೂದಿಸಿರುತ್ತದೆ :—

ನಂಬರ್	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತಪಶೀಲು		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟದ್ದು.	ಹೊಣೆಲಗು	ಬಹುಮಾನದ ತರಗತಿ.
					ರೂ.	
1	ಕೆಟ್ಟಗೌಡ ಬಿನ್ ಉಳ್ಳಿಗೌಡ.	ಹೆತ್ತಿಗೇನಹಳ್ಳಿ ...	ಕೃಷ್ಣರಾಜಪೇಟೆ	ಗಾಡಿ ಎತ್ತುಗಳ ಜೊತೆಗೆ.	20	1ನೆ ಬಹುಮಾನ
2	ಮಾದಪ್ಪ ಬಿನ್ ಗುರುಕಿದ್ದಪ್ಪ.	ಬೆಳಗುತ್ತಿ ...	ಹೊನ್ನಾಳಿ ...	ಡಿಟೋ ...	10	2ನೆ ಡಿಟೋ
3	ಏಡಿ ಮುದ್ವೀರಪ್ಪ .	ಡಿಟೋ ...	ಡಿಟೋ ...	ಉಳುವ ಎತ್ತಿನ ಜೊತೆಗೆ.	20	1ನೆ ಡಿಟೋ
4	ಕಪನಿಗೌಡ ...	ಜೋಗಿನಕೆರೆ ...	ಕೃಷ್ಣರಾಜಪೇಟೆ	ಡಿಟೋ ...	10	2ನೆ ಡಿಟೋ
5	ಕದಂ ರಾಮರಾವ್.	ಶಿದ್ಲಿಪುರ ...	ಶಿವಮೊಗ್ಗ ...	ಬೀಜದ ಹೋರಿ ಬಂದಕ್ಕೆ.	15	1ನೆ ಡಿಟೋ
6	ಪುರಾಣ ಮಠದ ನಂಜುಂಡಸ್ವ.	ಹೊಳೆಹೊನ್ನೂರು.	ಡಿಟೋ ...	ಎಮ್ಮೆ 1ಕ್ಕೆ ...	5	2ನೆ ಡಿಟೋ

ಎಂ. ನಾರಾಯಣರಾವ್,
ಪ್ರೆಸಿಡೆಂಟ್.